Executive summary of the UGC Approved Minor Research Project

Entitled: **'A CULTURAL STUDY OF KAMBALAS WITH SPECIAL REFERENCE TO DAKSHINA KANNADA DISTRICT'.** (**'ದಕ್ಷಿಣ ಕನ್ನಡ ಜಿಲ್ಲೆಯ ಚಾರಿತ್ರಿಕ ಕಂಬಳಗಳು : ಒಂದು ಸಾಂಸ್ಕೃತಿಕ ಅಧ್ಯಯನ'**).

Name of the Principal Investigator: Dr. Rohinaksha

**ಪ್ರಸ್ತಾವನೆ:** ಕಂಬಳ ಒಂದು ಆಚರಣೆಯಾಗಿ, ಒಂದು ಜನಪದರ ಕ್ರೀಡೆಯಾಗಿ ಗ್ರಾಮೀಣರ ಮನೋರಂಜನೆಯ ಮಾಧ್ಯಮವಾಗಿ ಈ ಭಾಗದಲ್ಲಿ ಪ್ರಸಿದ್ಧಿಯನ್ನು ಪಡೆದಿರುವುದನ್ನು ನೋಡಬಹುದು. ಸಾಮಾನ್ಯವಾಗಿ ತುಳುನಾಡಿನ ರೈತ ಸಮುದಾಯದ ಆಧಾರಸ್ತಂಭವಾಗಿರುವಂಥ ಕೆಸರು ಮಣ್ಣಿನಿಂದ ಕೂಡಿರುವಂಥ ಭತ್ತವನ್ನು ಬೆಳೆಯುವ ಗದ್ದೆಗಳನ್ನು 'ಕಂಬಳ ಗದ್ದೆ' ಎಂದು ಕರೆಯಲಾಗುತ್ತದೆ. ಕಂಬಳ ಒಂದು ಆಚರಣೆಯಾಗಿ ಅತ್ಯಂತ ಶ್ರದ್ಧೆ, ಭಕ್ತಿಗಳಿಂದ ಕೂಡಿ ಕೊಂಡ ಒಂದು ವಿಶಿಷ್ಟ ಆಚರಣೆಯೇ ಆಗಿದೆ. ಅದು ಭೂತಾರಾಧನೆ, ನಾಗಾರಾಧನೆಯಂಥ ಆನೇಕ ಬಗೆಯ ಆಚರಣೆಗಳೊಂದಿಗೆ ಸೇರಿಕೊಂಡ ಒಂದು ಚಟುವಟಿಕೆಯಾಗಿ ಕಾಣುತ್ತದೆ . ಈ ಆಚರಣೆಯು ಭೌಗೋಳಿಕವಾಗಿ ಉತ್ತರದ ಬಾರಕೂರಿನಿಂದ ದಕ್ಷಿಣದ ಕಾಸರಗೋಡಿನವರೆಗೂ ರೂಢಿಯಲ್ಲಿದೆ. ಈ ಕಂಬಳಕ್ಕೆ ಶತ ಶತಮಾನಗಳ ಸಾಂಸ್ಕೃತಿಕ, ಸಾಮಾಜಿಕ ಹಿನ್ನೆಲೆಯಿದೆ. ತುಳುನಾಡಿನ ಜೀವನದೊಂದಿಗೆ ಬೆರೆತುಕೊಂಡ ಪರಂಪರೆಯ ಐತಿಹ್ಯವಿದೆ. ಬೇರೆ ಬೇರೆ ಕಾಲಘಟ್ಟದಲ್ಲಿ ಬೇರೆ ಬೇರೆ ಅರಸು ಮನೆತನಗಳು ತಮ್ಮ ವ್ಯಾಪ್ತಿಯಲ್ಲಿ ಕಂಬಳ ಗದ್ದೆಗಳ ನಿರ್ಮಾಣ ಅವುಗಳ ನಿರ್ವಹಣೆ, ವಾರ್ಷಿಕವಾಗಿ ಅವುಗಳ ಆಚರಣೆ, ಜತೆಗೆ ಕೆಲವು ಪ್ರದೇಶಗಳಲ್ಲಿ' ಕಂಬಳ ಗದ್ದೆಗಳಿಗಾಗಿ ದಾನ-ದತ್ತಿಗಳನ್ನು ನೀಡಿರುವ ಉದಾರಣೆಗಳನ್ನು ಶಾಸನಗಳ ಮೂಲಕವು ಗಮನಿಸಬಹುದು.

**ಅಧ್ಯಯನದ ವಿವರಗಳು:** ಮೇಲ್ನೋಟಕ್ಕೆ ಕಂಬಳ ಒಂದು ಜನಪದ ಕ್ರೀಡೆ. ಅಂದರೆ ಅದು ಕೋಣಗಳನ್ನು ಓಡಿಸುವ ಒಂದು ಸ್ಪರ್ಧೆ. ಇದು ಪ್ರತ್ಯಕ್ಷವಾಗಿ ಕಂಬಳ ನಡೆಯುವ ಕ್ಷಣ ಬಹಿರಂಗದಲ್ಲಿ ಕಾಣುವ ಕ್ರಿಯಾಚರಣೆ. ಆದರೆ ಕಂಬಳ ಅಷ್ಟೇ ಅಲ್ಲ. ಕಂಬಳದ ದಿನ ನಿಗದಿಯಿಂದ ತೊಡಗಿ ಕಂಬಳದ ಮುಕ್ತಾಯದ ಬಳಿಕ ಆ ಗದ್ದೆಯಲ್ಲಿ ನೇಜಿ ನೇಡುವ (ಭತ್ತದ ಸಸಿಗಳನ್ನು ನೆಡುವ) ಕ್ರಿಯೆಯವರೆಗಿನದು ಸಂಪೂರ್ಣವಾಗಿ ಗಮನಿಸಿದರೆ ಇದೊಂದು ಸಮಗ್ರ ಚಟುವಟಿಕೆ. ಹಾಗಾಗಿ ಇಲ್ಲಿನ ಪ್ರತಿಯೊಂದು ಸಂಗತಿಗೂ ಅದರದೇ ಆದ ಮಹತ್ವವಿದೆ. ಕೆಸರಿನ ಗದ್ದೆಯಲ್ಲಿ ಕೋಣಗಳ ಓಟ ನಡೆಯುವುದರ ಜತೆಗೆ ಕಂಬಳಕ್ಕೆ ಸಾಂಸ್ಕೃತಿಕವಾದ ಮಹತ್ವವಿದೆ. ಸಾಮಾಜಿಕ ವಾದ ಮಹತ್ವವಿದೆ. ಬಂಧುತ್ವದ ನೆಲೆಗಳಿವೆ.

ಅಂದರೆ, ಸಾಂಸ್ಕೃತಿಕವಾಗಿ ಕಂಬಳ ಒಂದು ವಾರ್ಷಿಕ ಅವರ್ತಣ ಚಟುವಟಿಕೆಯಾಗಿ, ಕೃಷಿ ಮತ್ತು ದೈವಿಕತೆಗಳ ನಡುವಿನ, ನಂಟನ್ನು ವಿವಿಧ ಕ್ರಿಯಾಚರಣೆಗಳ ಮೂಲಕ ಗಟ್ಟಿಮಾಡುತ್ತಾ ಹೋಗುತ್ತದೆ. ಹೀಗಾಗಿ ಇದು ಒಂದು ಸಮುದಾಯದ ಸಹಭಾಗಿತ್ವದಲ್ಲಿ ನಡೆಯುತ್ತದೆ. ಒಂದಷ್ಟು ಮನರಂಜನೆಗಾಗಿ ಕೋಣಗಳನ್ನು ಓಡಿಸುವ ಮೂಲಕ ಆರಂಭಗೊಂಡಿರಬಹುದಾದ ಕಂಬಳಗಳು ಒಂದೆಡೆಯಾದರೆ, ಧಾರ್ಮಿಕವಾದ ಆಯಾಮವನ್ನು ಹೊಂದಿರುವ ವಿವಿಧ ಆಚರಣೆಗಳನ್ನು ಹೊಂದಿರುವ ಕಂಬಳಗಳು ಒಂದಷ್ಟು. ಹೀಗೆ ನಡೆಯುವ ಕಂಬಳಗಳನ್ನು ಅಧ್ಯಯನದ ದೃಷ್ಟಿಯಿಂದ ೧. ಸಾಂಪ್ರದಾಯಿಕ ಕಂಬಳಗಳು ಮತ್ತು ೨. ಆಧುನಿಕ ಕಂಬಳಗಳು ಎಂದು ವಿಶಾಲವಾದ ನೆಲೆಯಲ್ಲಿ ವಿಂಗಡಿಸಿಕೊಳ್ಳಬಹುದು. ಈ ಎರಡೂ ಬಗೆಯಿಂದ ಕಂಬಳಗಳು ಇಂದಿಗೂ ನಡೆಯುವುದನ್ನು ನೋಡಬಹುದು.

ಸಾಂಪ್ರದಾಯಕ ಕಂಬಳಗಳಲ್ಲಿ ಆರಾಧನೆಯೇ ಪ್ರಧಾನವಾಗಿದ್ದರೆ. ಆಧುನಿಕ ಕಂಬಳಗಳಲ್ಲಿ ವ್ಯಕ್ತಿ ಪ್ರತಿಷ್ಠೆಯ ಪ್ರತೀಕವಾಗಿ ಪ್ರಶಸ್ತಿ ಗೆಲ್ಲುವ ಪೈಪೋಟಿ ಹೆಚ್ಚು ಆದ್ಯತೆಯನ್ನು ಪಡೆಯಿತು. ಕೋಣಗಳ ಓಟದ ಸ್ಪರ್ಧೆಯನ್ನು ನೋಡುವುದಕ್ಕಾಗಿಯೇ ದೂರ ದೂರಾದ ಊರುಗಳಿಂದ ಜನ ಆಗಮಿಸತೊಡಗಿದರು. ಕಂಬಳಗಳೇ ಜಾತ್ರೆಯ ಸ್ವರೂಪವನ್ನು ಪಡೆದುಕೊಂಡಿತು.

ಕಂಬಳದಲ್ಲಿ ಸಾಂಪ್ರಾದಾಯಿಕ ಮತ್ತು ಆಧುನಿಕ ಎಂಬ ವಿಭಾಗಗಳನ್ನು ಮಾಡಿಕೊಂಡಂತೆ ಕಂಬಳದ ಕೋಣಗಳ ಓಟದ ಸ್ಪರ್ಧೆಯಲ್ಲಿ ಪ್ರಮುಖವಾಗಿ ನಾಲ್ಕು ಪ್ರಮುಖ ವಿಭಾಗಳಾಗಿವೆ. ಈ ನಾಲ್ಕು ವಿಭಾಗಗಳಲ್ಲಿ ಮತ್ತೆ ಹಿರಿಯ ವಿಭಾಗ ಮತ್ತು ಕಿರಿಯ ವಿಭಾಗ ಎಂದು ಕೋಣಗಳ ವಯೋಮಾನದ ಅನುಸಾರವಾಗಿ ವಿಂಗಡಿಸಲಾಗುತ್ತದೆ. ಓಟದ ಸ್ಪರ್ಧೆಯ ನಾಲ್ಕು ವಿಭಾಗಗಳೆಂದರೆ :

೧. ಅಡ್ಡ ಹಲಗೆ ( ಅಡ್ಡ ಪಲಾಯಿ)

೨. ನೇಗಿಲು ಓಟ (ನಾಯೆರ್‌ದವು)

೩. ಹಗ್ಗದ ಓಟ ( ಬಲ್ಲ್‌ದವು)

೪. ಕಣೆ ಹಲಗೆ (ಕಣೆ ಪಲಾಯಿ)

ಈ ನಾಲ್ಕು ವಿಭಾಗದಲ್ಲಿ ಕೋಣಗಳ ಓಟದ ಸ್ಪರ್ಧೆಯನ್ನು ನಡೆಸಲಾಗುತ್ತವೆ.

ಕಂಬಳ ಎಂಬ ವಿಶಿಷ್ಟ ಆಚರಣೆಯ ಜೀವಾಳವೇ ಸಾಂಪ್ರದಾಯಿಕ ಕಂಬಳಗಳು. ನೂರಾರು ವರ್ಷಗಳ ಇತಿಹಾಸವನ್ನು ಹೊಂದಿರುವ ಈ ಕಂಬಳಗಳು ನಿರಂತರವಾಗಿ ಒಂದು ಆಚರಣೆಯಾಗಿ, ಉತ್ಸವವಾಗಿ ನಡೆದುಕೊಂಡು ಬಂದಿದೆ. ಈ ನಿರಂತರತೆಯೇ ಈ ಕಂಬಳಗಳ ಮಹತ್ವವನ್ನು ಸಾರಿ

ಹೇಳುತ್ತವೆ. ಸಾಂಪ್ರದಾಯಿಕವಾಗಿ ನಡೆಯುತ್ತಿದ್ದ ಈ ಕಂಬಳಗಳಲ್ಲೂ ಹಲವು ವೈಶಿಷ್ಯಪೂರ್ಣ ಭಿನ್ನತೆಗಳಿವೆ. ಹೊಸತನವಿದೆ. ಸಾಂಪ್ರದಾಯಿಕವಾಗಿ ನಡೆಯುವ ಕಂಬಳಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದಾಗಿದೆ.

೧. ಬಾರೆ ಕಂಬಳ

೨. ಅರಸು ಕಂಬಳ ಮತ್ತು ದೇವರ ಕಂಬಳ

೩. ಹುಡಿ ಕಂಬಳ

೪. ಪೂಕರೆ ಕಂಬಳ

ಮೂಹೂರ್ತದ ದಿನದಂದ ಆರಂಭದಲ್ಲಿ ಅರಸರ ಒಕ್ಕಲುಗಳಾಗಿರುವವರ ಕೋಣಗಳನ್ನು ಗದ್ದೆಗೆ ಇಳಿಸಿ ಮೂರು ಬಾರಿ ಗದ್ದೆಯ ಉಳುಮೆಯನ್ನು ಮಾಡಲಾಗುತ್ತದೆ. ಆ ಬಳಿಕ ಜ್ಯೋತಿಷಿಗಳು ನಿಗದಿ ಪಡಿಸಿದ ಮೂಹೂರ್ತದ ಸಮಯದಲ್ಲಿ ಅರಸರ ಕೋಣಗಳನ್ನು ಕಂಬಳದ ಗದ್ದೆಗೆ ಇಳಿಸಲಾಗುತ್ತದೆ. ಎರುಬಂಟ ಎಂಬ ಭೂತವು ಕಂಬಳದ ಒಂದು ಅವಿಭಾಜ್ಯ ಅಂಗವಾಗಿರುವುದನ್ನು ನೋಡಿದರೆ ಕಂಬಳ ಎಂಬ ಪ್ರಕ್ರೀಯೆಗೆ ಇರುವ ಆಚರಣಾತ್ಮಕ ನೆಲೆ ಸ್ಪಷ್ಟವಾಗುತ್ತದೆ. ಕಂಬಳದ ಹೊತ್ತಿನಲ್ಲಿ ಎರುಬಂಟ ದೈವ ಕಂಬಳ ಗದ್ದೆಯ ಸುತ್ತಲೂ ಸಂಚರಿಸುತ್ತಾ ಕಂಬಳ ಗದ್ದೆಗೆ ಒಂದು ದೈವಿಕ ರಕ್ಷಣೆಯ ಅಭಯದ ಭಾವನೆಯನ್ನು ಮೂಡಿಸುತ್ತದೆ. ಹೀಗೆ ಕಂಬಳಕ್ಕೆ ಇಳಿದ ಕೋಣಗಳನ್ನು ಒಮ್ಮೆ ಓಡಿದ ನಂತರ ಮತ್ತೆ ತಂದು ದರಿಗುಂಟಕ್ಕೆ ಕಟ್ಟಿಹಾಕಲಾಗುತ್ತದೆ.

ಸಾಮಾನ್ಯವಾಗಿ ಕೃಷಿಕ ಬದುಕಿನ ಹಿನ್ನೆಲೆಯ ಜನರು ತಾವು ಸಾಕಿದ ದನಗಳು ಬಹುಕಾಲದವರೆಗೆ ಕರು ಹಾಕದಿದ್ದರೆ, ಕರು ಹಾಕಿಯೂ ಸರಿಯಾದ ಪ್ರಮಾಣದಲ್ಲಿ ಹಾಲು ಕೊಡದಿದ್ದರೆ, ಗದ್ದೆಯ ಉಳುಮೆಗಾಗಿ ಸಾಕಿದ ಎತ್ತುಗಳು ಉಳುಮೆಗೆ ಕಟ್ಟಿದಾಗ ಉಳಲು ಒಪ್ಪದಿದ್ದರೆ, ಹಟ್ಟಿಯ ದನಕರುಗಳಿಗೆ ಯಾವುದಾದರೂ ಕಾಯಿಲೆಗಳು ಬಂದರೆ ಹಾಗೂ ಹೊಸದಾಗಿ ದನ-ಕರು-ಎತ್ತು-ಎಮ್ಮೆ-ಕೋಣಗಳನ್ನು ಖರೀದಿಸಿದರೆ, ರೈತರು ಅಂತಹ ಸಂದಭದಲ್ಲಿ ತಾವು ಖರೀದಿ ಮಾಡಿದ ಪಶುಗಳನ್ನು ಕಂಬಳದ ಕೋರಿಗದ್ದೆಗೆ ಇಳಿಸುವೆವು ಎಂದು ಹರಕೆಯನ್ನು ಹೇಳಿಕೊಳ್ಳಲಾಗುತ್ತದೆ.

ಪೂಕರೆ ಕಂಬಳದಲ್ಲಿ ಪೂಕರೆಯನ್ನು ನೆಡುವ ಪ್ರಕ್ರಿಯೆಯ ಒಂದು ಧಾರ್ಮಿಕ ಆಚರಣೆಯ ಸ್ವರೂಪದಲ್ಲಿ ನಡೆಯುತ್ತದೆ. ಕಂಬಳ ಗದ್ದೆಯ ಯಜಮಾನ ಕಂಬಳ ಗದ್ದೆಯಲ್ಲಿ ಇಳಿದು ಪೂಕರೆ ನೆಡುವ ಜಾಗಕ್ಕೆ ಹಾಲು, ನೀರು ಎರೆಯುತ್ತಾನೆ. ಒಂದು ಬಾರಿ ಪೂಕರೆ ನೆಟ್ಟ ಮೇಲೆ ಕೋಣಗಳನ್ನು ಆ ಗದ್ದೆಗೆ ಇಳಿಸಲಾಗುವುದಿಲ್ಲ. ಬೆಳೆ ಕೊಡುವ ಮಣ್ಣನ್ನು ಗೌರವದಿಂದ ಕಾಣುವ ಜನಪದ ಸಂಸ್ಕೃತಿ, ಬೆಳೆಗೆ, ಮಣ್ಣಿಗೆ ಆ ಮೂಲಕ ಒಟ್ಟು ಕೃಷಿ ಪರಂಪರೆಗೆ ವಿಶೇಷವಾದ ಗೌರವವನ್ನು ಸಲ್ಲಿಸಿದೆ. ಪೂಕರೆ

ಕಂಬಳವನ್ನು ನೆಡುವುದರ ಮೂಲಕ ಮಣ್ಣಿನ ಜತೆಗಿನ ತಮ್ಮ ಕೃಷಿ ಕ್ರಿಯೆಗೆ ಒಂದು ಫಲವಂತಿಕೆಯ ಒಂದು ಆಚರಣೆಯಾಗಿ ನೋಡಲಾಗಿದೆ.

ಕಂಬಳದ ಬಗ್ಗೆ ಮಾತನಾಡುವವರೆಲ್ಲರೂ ಕಂಬಳವನ್ನು ಒಂದು ಕ್ರೀಡೆಯಾಗಿ, ಕೋಣಗಳ ಓಟದ ಸ್ಪರ್ಧೆಯಾಗಿ ನೋಡುತ್ತಿದ್ದರು. ಹೀಗಾಗಿ ಇದೊಂದು ಜನಪದ ಆಟ ಎಂದೇ ಭಾವಿಸಲಾಗುತ್ತಿತ್ತು. ಆದರೆ ಕಂಬಳದ ಕುರಿತು ಅಧ್ಯಯನ ಮಾಡುವಾಗ ಅಲ್ಲಿನ ಆಚರಣಾ ಪ್ರಕ್ರಿಯೆಗಳನ್ನು ವಿಮರ್ಶಾತ್ಮಕವಾಗಿ, ಸೂಕ್ಷ್ಮ ಮತಿಗಳಾಗಿ ನೋಡಿದರೆ, ಇದೊಂದು ಕೇವಲ ಕ್ರೀಡೆಯಲ್ಲ, ಕೇವಲ ಒಂದು ಆಟವಲ್ಲ ಎಂದು ತಿಳಿದುಬರುತ್ತದೆ. ಬಾರೆ ಕಂಬಳ, ಅರಸು ಕಂಬಳ, ದೇವರ ಕಂಬಳ, ಪೂಕರೆ ಕಂಬಳಗಳನ್ನು ಕುರಿತಾಗಿ ಅಧ್ಯಯನ ಮಾಡಿದಾಗ ಅವುಗಳು ಹಲವು ವಿಧಿವಿಧಾನಗಳನ್ನು ಒಳಗೊಂಡಿರುವುದು ಕಾಣುತ್ತದೆ. ಈ ವಿಧಿವಿಧಾನಗಳು ಒಂದು ಆಟದ ವಿಧಿ ವಿಧಾನಗಳಲ್ಲ. ಅದು ಒಂದು ಆರಾಧನೆಯ ಪ್ರಕ್ರಿಯೆಗಳು ಎಂದು ನೋಡಬೇಕು.

ಕಂಬಳ ನಡೆಯುವ ದಿನ ಸಮೀಪದ ನಾಗಬನಕ್ಕೆ ತೆರಳಿ ನಾಗನ ಪೂಜೆಯನ್ನು ಮಾಡುವುದಾಗಲಿ, ನಾಗನ ಪೂಜೆಯನ್ನು ಮಾಡುವುದಾಗಲಿ, ನಾಗನ ಪೂಜೆಗೆ ಇರಿಸಿದ ಅಡಿಕೆ ಹಿಂಗಾರವನ್ನು ಕಂಬಳದ ಕೋಣಗಳ ಹಣೆಗೆ ಕಟ್ಟುವುದಾಗಲಿ, ಕಂಬಳದ ಗದ್ದೆಗೆ ಭೂತವೊಂದು ಪ್ರದಕ್ಷಿಣೆ ಬರುವುದಾಗಲಿ, ಕಂಬಳದ ಗದ್ದೆಯಲ್ಲಿ ಕಂಬಳಕ್ಕಿಂತಲೂ ಮುಂಚೆ ಕೊರಗ ಸಮುದಾಯವರಿಂದ ನಡೆಯುತ್ತಿದ್ದ ' ಪನಿಕುಲ್ಲುನಿ' ಆಚರಣೆಯಾಗಲಿ, ಹರಕೆಯ ರೂಪದಲ್ಲಿ ಎತ್ತು, ಕೋಣಗಳನ್ನು ಗದ್ದೆಗೆ ಇಳಿಸುವುದರಿಂದ ಅವುಗಳಿಗೆ ಒಳಿತಾಗುತ್ತದೆ ಎಂದು ಭಾವಿಸುವುದಾಗಲಿ, ಕಂಬಳದ ಗದ್ದೆಗೆ ಸಂಬಂಧಿಸಿದ ಕೆಲವೊಂದು ಮಡಿ ಮೈಲಿಗೆಯ ಕಲ್ಪನೆಗಳು ಇರುವುದಾಗಲಿ, ಪೂಕರೆ ಕಂಬಳವನ್ನು ನೆಡುವುದಾಗಲಿ, ಅದಕ್ಕೆ ಹಾಲೆರೆಯುವುದಾಗಲಿ, ಅತಿ ಮುಖ್ಯ ನೆಲೆಯಿಂದ ಒಂದು ಧಾರ್ಮಿಕ ವಿಧಿಯೇ ಹೊರತು ಒಂದು ಮನರಂಜನೆಯ ಕ್ರೀಡೆ ಅಲ್ಲ. ಕಂಬಳ ಉತ್ಸವ, ಕಂಬಳ ಗದ್ದೆಗೆ ಸಂಬಂಧಿಸಿ ಆಚರಣೆಗಳನ್ನು, ಅಲ್ಲಿನ ವಿಧಿ ನಿಷೇಧಗಳನ್ನು ಗಮನಿಸಿದರೆ ಈ ಪ್ರಕ್ರಿಯೆಯು ಅವರ ಮನರಂಜನೆ ಮತ್ತು ಅಲ್ಲಿನ ಕ್ರೀಡಾ ಮನೋಭಾವಕ್ಕಿಂತ ಹೆಚ್ಚಿನ ಒಂದು ಫಲವಂತಿಕೆಯ ಅಚರಣೆಯೇ ಹೌದು.

**ಉಪಸಂಹಾರ:** ಕೃಷಿ ಬದುಕಿನ, ಗ್ರಾಮೀಣದ ಕೂಡು ಬದುಕಿನ ಸಂಕೇತವಾಗಿ ಕಂಬಳ ನಡೆಯುತ್ತದೆ. ಸಮಾಜದ ಎಲ್ಲಾ ಸಮುದಾಯಗಳು ಕೂಡಿ, ಊರಿನ ಒಂದು ಹಬ್ಬವಾಗಿ ಆಚರಿಸುತ್ತಿದ್ದ ಬಗೆಯಲ್ಲಿ ಇಲ್ಲಿ ಗುರುತಿಸಬಹುದಾಗಿದೆ. ಊರಿನ ಗುತ್ತಿನ ಮನೆಗಳಿಂದ, ಭೂಮಾಲಿಕರಿಂದ ತೊಡಗಿ ಸಾಮಾನ್ಯ ರೈತ,

ಕೃಷಿ ಕಾರ್ಮಿಕರೆಲ್ಲರೂ ಸೇರಿ, ಸಮಾಜದ ಎಲ್ಲಾ ಜಾತಿ ವರ್ಗಗಗಳಲ್ಲಿ ಕೂಡ ಬೇರೆ ಬೇರೆ ರೂಪದಲ್ಲಿ ನೇರವಾಗಿ ಭಾಗವಹಿಸುತ್ತಾರೆ.

ಕೃಷಿ ಬದುಕು ಮತ್ತು ಕೃಷಿಗೆ ಆಧಾರವಾದ ಕೋಣಗಳ ನಡುವೆ ಕೃಷಿಕ ಸಾಧಿಸಿದ ಸಮನ್ವಯ ಕಂಬಳ ಆಚರಣೆ. ಈ ಆಚರಣೆ ಆ ಸೀಮೆಯ, ಪ್ರದೇಶದ ಉಳಿದ ಆರಾಧನೆಗಳ ಜೊತೆಗೆ ಸಾಧಿಸಿದ ಸಮನ್ವಯವೂ ಹೌದು. ಹೀಗಾಗಿ ನಾಗಾರಾಧನೆ, ಭೂತಾರಾಧನೆಯ ಜತೆಗೆ ಅದು ಸಾಧಿಸಿರುವ ಸಂಬಂಧ ಇಲ್ಲಿ ವಿಶೇಷವಾಗಿ ತೆರೆದುಕೊಳ್ಳುತ್ತದೆ. ಆ ಮೂಲಕ ಕೃಷಿಯ ಉದ್ದೇಶವಾದ ಫಲವಂತಿಕೆ ಮತ್ತು ಆಚರಣೆಯ ರೂಪದ ಕಂಬಳವೂ ಕೂಡ ಅದೇ ಆಶಯವನ್ನು ಪ್ರತಿನಿಧಿಸುತ್ತದೆ.

**Principal Investigator**